## ಕವಿತೆ




**ಎಚ್‌.ಆರ್‌. ರಮೇಶ್**

ಕಲೆ: ಎಸ್‌.ವಿ. ಹೂಗಾರ್



# ಅಣು ಜೀವ

ಕಂಡಿದೆ ಆಳದಲಾಡುತಿರುವುದ
ಮೇಲೆಯೇ
ಅದರಿಂದ ಇದರ ಉಸಿರು
ಅಸ್ತಿತ್ವ
ಆಕಾಶವ ಈಜಿದೆ
ಇಷ್ಟನ್ನು ಪಡೆಯಲು ಧ್ಯಾನ
ಅನಂತದಲ್ಲಿ ಅವಿರತ
ಬೆಳಕಿನ ವೇಗದಲಿ ಆಗಿ ಹೋಗುವುದು
ದೂರದಲ್ಲೇ ಕ್ರಮಿಸುವುದ
ಶಿಲೆಯಂತೆ ನಿಶ್ಚಲ ಆಗಿ
ಮಿಸುಕದೆ
ಅರಿತಿದೆ
ಅಲ್ಲಿಂದ ಅಲ್ಲಿಗೆ ತನ್ನ ಇರುವ
ಇಲ್ಲವಾಗಿಸಿಕೊಂಡು
ಇಳಿದಿದೆ
ಅಣುವಲ್ಲಿ ಸಂಧಿಸಿ ಅಣು
ಜೀವದಲ್ಲಿ ಜೀವ.



# ಅಪೂರ್ವತೆ

ಆಗುತ್ತಿರುವುದನು ನೋಡುತ್ತಿರುವಾಗ
ಬದುಕು ಉಕ್ಕುತ್ತಿರುತ್ತದೆ,
ನೋಡುವಾಗ ಎಲ್ಲ ಬಿಡಬೇಕು,
ಆಗ ಉಕ್ಕುವಲ್ಲಿ ಮೀಯಬಹುದು,
ತೇಲಬಹುದು,
ಉಕ್ಕಿ ಹರಿವ ಓಘ,
ಹೋದದ್ದೇ ಹಾದಿ,
ಆದರೆ ಓಘದ ತೀವ್ರತೆಯಲಿ
ಕೊಚ್ಚಿ ಹೋಗುವ ಅಪಾಯವೇ ಹೆಚ್ಚು,
ಹಾಗಾಗಿ ನೋಡಬೇಕು
ನಗುವ ಮೊಗ್ಗೊಂದು ಉರಿವ ಸರ್ಯನನ್ನು
ನೋಡುವಂತೆ;
ಆದರೆ,
ನೋಡುವಾಗ ನೋಡಲ್ಪಡುವುದೂ
ನೋಡಬೇಕಲ್ಲ!

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68